

# ಕಾಮನಬಿಲ್ಲಿನ ನದಿ!

ಕಾಮನಬಿಲ್ಲಿನ ಪರ್ವತದ ಬಗ್ಗೆ ತಿಳಿದಿದ್ದೀರಿ. ಅಮೆರಿಕದ ಫ್ಲೋರಿಡಾದ ಡನ್ನೆಲ್ಲಾನಲ್ಲೊಂದು ನದಿಯಿದೆ. ಇದು ಕಾಮನಬಿಲ್ಲಿನ ಬಣ್ಣದ ನದಿಯಾಗಿದೆ.

ಈ ನದಿ ಸುಮಾರು 9.2 ಕಿ.ಮೀ. ಉದ್ದವಿದೆ. ಇದರ ಮೂಲ ಝರಿಯೊಂದಿಗೆ ಹಲವಾರು ಝರಿಗಳು ಗುಹೆಗಳು, ಬಂಡೆಯ ಸಂದುಗಳಿಂದ ನದಿಯುದ್ದಕ್ಕೂ ಸೇರಿಕೊಳ್ಳುತ್ತವೆ. ಇದರಿಂದ ನೂರಾರು ಲವಣಗಳು ಸೇರಿಕೊಂಡು ವಿವಿಧ ಬಣ್ಣಗಳು ಗೋಚರಿಸುತ್ತವೆ.

ಕಾಮನಬಿಲ್ಲಿನ ಝರಿಯ ಸ್ಟೇಟ್ ಪಾರ್ಕ್‌ಗೆ ಈ ನದಿಯೇ ಮೂಲ. ಇದು 1459 ಎಕರೆ ವಿಸ್ತೀರ್ಣದಲ್ಲಿದೆ. ಈ ಪಾರ್ಕ್ ವನಭೋಜನ, ಈಜಾಟಕ್ಕೆ ಹೇಳಿ ಮಾಡಿಸಿದ ತಾಣ. ಇದು ಹತ್ತು ಸಾವಿರ ವರ್ಷಗಳಿಂದ ಜನರನ್ನು ತನ್ನತ್ತ ಸೆಳೆಯುತ್ತಲಿದೆ. ಸ್ಫಟಿಕದಂತೆ ನಿರ್ಮಲವಾದ ನೀರಿನಲ್ಲಿ ಹೇರಳವಾದ ಮೀನುಗಳು, ವನ್ಯಮೃಗಗಳು, ಜೀವಜಾಲದ ಉಳಿಯುವಿಕೆಗೆ ಸಾಕ್ಷಿಯಾಗಿವೆ.

ಕಾಮನಬಿಲ್ಲಿನ ನದಿ ಮತ್ತು ಝರಿಗಳು 1880 ರ ಹೊತ್ತಿಗೆ ಪ್ರಸಿದ್ಧಿಗೆ ಬಂದವು. ಈ ವಲಯದಲ್ಲಿ ಸಲ್ಫೇಟ್ ಇರುವಿಕೆಯನ್ನು ಗುರುತಿಸಲಾಗಿತ್ತು. 1930 ರ ನಂತರ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಗೊಳಿಸಲಾಯಿತು. ಅಂಗಡಿಗಳು, ಜಲಪಾತಗಳು, ಸರೀಸೃಪಗಳ ಪಾರ್ಕ್‌ಗಳು ಬೆಳಕಿಗೆ ಬಂದವು. 1960 ರಲ್ಲಿ ಇನ್ನೂ ಹೊಸ ಹೊಸ ಪ್ರವಾಸಿ ಆಕರ್ಷಣೆಗಳು ಕೈ ಮಾಡಿ ಕರೆದವು. ಗಾಜಿನ ತಳವಿರುವ ಡೋಣಿ ಪಯಣ, ಮೋನೋ ರೈಲುಗಳು, ರಾಫ್ಟಿಂಗ್, ಸವಾರಿ, ಸಬ್ ಮೆರೀನ್‌ನಲ್ಲಿ ಪಯಣ ಮತ್ತು ಕೆಫೆಗಳು ಹೊರಹೊಮ್ಮಿದವು. 1995 ರ ಸಮಯಕ್ಕೆ ಪ್ರವಾಸಿಗರಿಗೆ ಪೂರ್ಣಾವಧಿಯಲ್ಲಿ ಇಡೀ ವಾರ ಲಭ್ಯವಾದವು.

■ ಪ್ರಕಾಶ ಎಸ್. ಮನ್ನಂಗಿ

